ಮೇ-01-2014ರ ಕಾರ್ಮಿಕರ ದಿನಾಚರಣೆ
ಮಂಡ್ಯ.

6
ಉದಯವಾಣಿ ಬೆಂಗಳೂರು
ಶನಿವಾರ | ಮೇ | 3 | 2014



ಜಗತ್ತಿನಲ್ಲಿ ಸ್ಪೀಡಾಗಿರುವ ಎರಡು ನೆಟ್‌ವರ್ಕ್; 1.ಈಮೇಲ್, 2.ಫೀಮೇಲ್!
■ ಬೆಸ್ಟ್ ಜೋಕ್ಸ್

ಪಂಚ್‌ರ್!
ಅತಿ ಹೆಚ್ಚು ಮತದಾನದಿಂದ ಕಂಗೆಟ್ಟ ನಕ್ಸಲರು
- ಗನ್‌ಗಿಂತಲೂ ಮತಯಂತ್ರದ ಬಟನ್ ಅತಿ ಶಕ್ತಿಶಾಲಿ!

# ಗಾರ್ಮೆಂಟ್ಸ್ ನೌಕರರ ನಿತ್ಯ ಸಂಬಳ 59 ರೂ. ಹೆಚ್ಚಳ

## ■ ಒಮ್ಮೆಲೆ ಇಷ್ಟೊಂದು ಹೆಚ್ಚಿಸಿದ್ದು ಇದೇ ಮೊದಲು ■ ಆದರೂ ಮಾಸಿಕ 6500 ರೂ. ದಾಟಿಲ್ಲ: ಕಾರ್ಮಿಕರ ಅಳಲು

■ ರಫೀಕ್ ಅಹ್ಮದ್

**800** ರಾಜ್ಯದಲ್ಲಿರುವ ಒಟ್ಟು ಗಾರ್ಮೆಂಟ್ಸ್ ಕಾರ್ಖಾನೆಗಳು

**06 ಲಕ್ಷ** ಗಾರ್ಮೆಂಟ್ಸ್ ಕಾರ್ಮಿಕರ ಒಟ್ಟು ಸಂಖ್ಯೆ

**04 ಲಕ್ಷ** ಬೆಂಗಳೂರಿನಲ್ಲಿರುವ ನೌಕರರ ಸಂಖ್ಯೆ

**240 ರೂ.** ಗಾರ್ಮೆಂಟ್ಸ್ ಕಾರ್ಮಿಕರು ಪಡೆಯುತ್ತಿರುವ ಗರಿಷ್ಠ ವೇತನ



ಏಪ್ರಿಲ್ ನಿಂದಲೇ ಜಾರಿ

ಬೆಂಗಳೂರು: 34 ವರ್ಷಗಳ ಬಳಿಕ ಗಾರ್ಮೆಂಟ್ಸ್ ನೌಕರರ ವೇತನ ಪರಿಷ್ಕರಣೆಯಲ್ಲಿ ಸರ್ಕಾರ ಸ್ವಲ್ಪ ಮಟ್ಟಿಗೆ ಕರುಣೆ ತೋರಿಸಿದ್ದು, ದಿನಕ್ಕೆ 59 ರೂ. ಹೆಚ್ಚಳ ಮಾಡಿದೆ. ಆದರೆ, ತಿಂಗಳ ಕನಿಷ್ಠ ವೇತನದ ಬಗ್ಗೆ ಕಾರ್ಮಿಕ ವಲಯದಲ್ಲಿ ಇನ್ನೂ ಅಸಮಾಧಾನವಿದೆ.

ಗಾರ್ಮೆಂಟ್ಸ್ ಕಾರ್ಮಿಕರ ವೇತನವನ್ನು ದಿನಕ್ಕೆ ಹೆಚ್ಚುವರಿ 27 ರೂ. ಹಾಗೂ ತುಟ್ಟಿ ಭತ್ಯೆ 32 ರೂ.ಗಳಂತೆ ಒಟ್ಟು 59 ರೂ.ಗೆ ಪರಿಷ್ಕರಿಸಿ ಇತ್ತೀಚೆಗೆ ಆದೇಶ ಹೊರಡಿಸಿರುವ ರಾಜ್ಯ ಸರ್ಕಾರ, ಏಪ್ರಿಲ್ ತಿಂಗಳ ವೇತನದಲ್ಲಿ ಪರಿಷ್ಕೃತ ವೇತನದ ಮೊತ್ತವನ್ನು ಸೇರಿಸಿ ಕೊಡುವಂತೆ ಎಲ್ಲ ಗಾರ್ಮೆಂಟ್ಸ್ ಕಾರ್ಖಾನೆ ಮಾಲೀಕರಿಗೆ ಸೂಚನೆ ನೀಡಿದೆ.

ಗಾರ್ಮೆಂಟ್ಸ್ ಕಾರ್ಖಾನೆಗಳನ್ನು 'ಶೆಡ್ಯೂಲ್'ಗೆ ಸೇರಿಸಿದ ಮೇಲೆ 1979ರಲ್ಲಿ ಗಾರ್ಮೆಂಟ್ಸ್ ಕಾರ್ಮಿಕರನ್ನು ಕನಿಷ್ಠ ವೇತನ ವ್ಯಾಪ್ತಿಗೆ ತರಲಾಗಿತ್ತು. ಅಂದಿನಿಂದ ಕಾಲ-ಕಾಲಕ್ಕೆ ವೇತನ ಪರಿಷ್ಕರಣೆಯಾಗುತ್ತಾ ಪ್ರತಿ ಬಾರಿ 5 ರಿಂದ 15 ರೂ.ವರೆಗೆ ಪರಿಷ್ಕರಣೆ ಮಾಡಲಾಗುತ್ತಿತ್ತು. ಆದರೆ ಒಂದೇ ಬಾರಿಗೆ ತುಟ್ಟಿ ಭತ್ಯೆ ಸೇರಿ 59 ರೂ. ವೇತನ ಪರಿಷ್ಕರಣೆ ಮಾಡಿರುವುದು ಇದೇ ಮೊದಲು.

ಅಲ್ಲದೇ ಪ್ರತಿ ಐದು ವರ್ಷಕ್ಕೊಮ್ಮೆ ವೇತನ ಪರಿಷ್ಕರಣೆ ಮಾಡಬೇಕು ಎಂಬ ನಿಯಮವಿದೆ. ಆದರೆ ಹಿಂದೆ ಯಾವತ್ತೂ ಐದು ವರ್ಷಕ್ಕೆ ವೇತನ ಪರಿಷ್ಕರಣೆ ಆಗಿರಲಿಲ್ಲ, ಈ ಬಾರಿ ಐದು ವರ್ಷಕ್ಕೆ ವೇತನ ಪರಿಷ್ಕರಣೆ ಮಾಡಿರುವುದು ವಿಶೇಷ.

ಪರಿಷ್ಕೃತ ವೇತನದಂತೆ ದಿನಂಪ್ರತಿ 27 ರೂ. ಹೆಚ್ಚುವರಿ ವೇತನ ಮತ್ತು 32 ರೂ. ತುಟ್ಟಿ ಭತ್ಯೆ ಸೇರಿ 59 ರೂ. ಸಿಗುತ್ತದೆ. ಅದರಂತೆ ಕುಶಲರಹಿತ ಮತ್ತು ಅತಿಕುಶಲ ಸೇರಿದಂತೆ ವಿವಿಧ ಹಂತದ ಗಾರ್ಮೆಂಟ್ಸ್ ಕಾರ್ಮಿಕರಿಗೆ ದಿನದ ವೇತನ ರೂ.210 ರಿಂದ 240 ರವರೆಗೆ ಸಿಗುತ್ತದೆ. ಆ ಪ್ರಕಾರ ತಿಂಗಳ ವೇತನ ಸುಮಾರು 6,500 ರೂ. ಆಗುತ್ತದೆ.

**ಅಸಮಾಧಾನ:** ದಿನದ ವೇತನ 59 ರೂ. ಹೆಚ್ಚಳ ಮಾಡಿದ್ದರೂ ತಿಂಗಳ ಕನಿಷ್ಠ ವೇತನದ ಬಗ್ಗೆ ಅಸಮಾಧಾನ ವ್ಯಕ್ತಪಡಿಸುತ್ತಿರುವ ಗಾರ್ಮೆಂಟ್ಸ್ ಕಾರ್ಮಿಕರ ಸಂಘಟನೆಗಳು, ಅಗತ್ಯ ವಸ್ತುಗಳ ಬೆಲೆ ಗಗನಕ್ಕೆ ಏರಿದ್ದು ಕನಿಷ್ಠ 10 ಸಾವಿರ ರೂ. ಆದರೂ ವೇತನ ನಿಗದಿಪಡಿಸಬೇಕು ಎಂಬ ಬೇಡಿಕೆ ಇಟ್ಟಿವೆ.

ರಾಜ್ಯದಲ್ಲಿ 800 ಗಾರ್ಮೆಂಟ್ಸ್ ಕಾರ್ಖಾನೆಗಳಿದ್ದು, ಅದರಲ್ಲಿ ಸುಮಾರು 6 ಲಕ್ಷ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಈ ಪೈಕಿ ಬೆಂಗಳೂರಿನಲ್ಲಿ ಅತಿ ಹೆಚ್ಚು ಕಾರ್ಖಾನೆಗಳಿದ್ದು ಅದರಲ್ಲಿ ಅಂದಾಜು 4 ಲಕ್ಷ ಕಾರ್ಮಿಕರಿದ್ದಾರೆ. ಉಳಿದಂತೆ ಮೈಸೂರು, ಮಂಡ್ಯ, ರಾಮನಗರ, ತುಮಕೂರು, ಕೋಲಾರ, ಬೆಳಗಾವಿ, ಹುಬ್ಬಳ್ಳಿ, ಬಳ್ಳಾರಿ ಮತ್ತಿತರ ಕಡೆಗಳಲ್ಲೂ ಗಾರ್ಮೆಂಟ್ಸ್ ಉದ್ಯಮ ವಿಸ್ತರಣೆಗೊಂಡಿದೆ.

ಗಾರ್ಮೆಂಟ್ಸ್ ಕಾರ್ಖಾನೆಗಳು ಮೂರು ವಲಯಗಳಲ್ಲಿ ವಿಂಗಡಿಸಲಾಗಿದೆ. ಬೆಂಗಳೂರು ನಗರ ವಲಯದ-1, 10 ಮಹಾನಗರ ಪಾಲಿಕೆಗಳ ವ್ಯಾಪ್ತಿ ವಲಯ-2 ಮತ್ತು ಉಳಿದ ನಗರಗಳ ಗಾರ್ಮೆಂಟ್ಸ್ ಕಾರ್ಖಾನೆಗಳು ವಲಯ-3ರ ವ್ಯಾಪ್ತಿಗೆ ಒಳಪಡುತ್ತವೆ.

ವಲಯ 1ರ ಗಾರ್ಮೆಂಟ್ಸ್ ಕಾರ್ಮಿಕರಿಗೆ ಕುಶಲರಹಿತ ಮತ್ತು ಅತಿಕುಶಲ ಕಾರ್ಮಿಕರಿಗೆ ದಿನದ ವೇತನ 220 ರಿಂದ 240 ರೂ, ವಲಯ 2ರ ಕಾರ್ಮಿಕರಿಗೆ 215ರಿಂದ 225 ಮತ್ತು ವಲಯ 3ರ ಕಾರ್ಮಿಕರಿಗೆ 210 ರಿಂದ 220 ರೂ. ನೀಡಲಾಗುತ್ತಿದೆ.

### ಬದುಕಿನ ವೇತನ ಕೊಡಿ

ಒಬ್ಬ ಗಾರ್ಮೆಂಟ್ಸ್ ಕಾರ್ಮಿಕನಿಗೆ 6,500 ರೂ. ಕನಿಷ್ಠ ವೇತನ ನೀಡುತ್ತಿರುವುದು ಮೂಗಿಗೆ ತುಪ್ಪ ಸವರಿದಂತೆ. ಕನಿಷ್ಠ ವೇತನ 10 ರಿಂದ 12 ಸಾವಿರ ರೂ. ನೀಡಬೇಕು ಎನ್ನುವುದು ಅತೀ ಕನಿಷ್ಠ ಬೇಡಿಕೆ. ಗಾರ್ಮೆಂಟ್ಸ್ ಕಾರ್ಮಿಕರು ನಿಜವಾಗಿ ಕೇಳುತ್ತಿರುವುದು 'ಬದುಕಿನ ವೇತನ'. ಅಂದರೆ ಒಬ್ಬ ಕಾರ್ಮಿಕನಿಗೆ ಕನಿಷ್ಠ 16 ರಿಂದ 18 ಸಾವಿರ ರೂ. ವೇತನ ನೀಡಬೇಕು. ಆತ ಮತ್ತು ಕುಟುಂಬ ಗೌರವದ ಬದುಕು ಬದುಕುವಂತಾಗಬೇಕು ಎನ್ನುವುದು ನಮ್ಮ ಒತ್ತಾಯ.

● ಕೆ.ಆರ್. ಜಯರಾಮ್, ಮುಖಂಡ, ಕರ್ನಾಟಕ ಗಾರ್ಮೆಂಟ್ಸ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್.

ಕನಿಷ್ಠ ವೇತನ ಪರಿಷ್ಕರಣೆ ಬಗ್ಗೆ.

BANGALORE
THE HINDU • THURSDAY, MAY 1, 2014

# Highest one-time hike in minimum daily wages

Bageshree S.

**Garment workers have something to cheer about this May Day**

**BANGALORE:** Garment workers numbering over four lakh in the State have something to cheer about this May Day.

The revision of minimum wages notified recently has provided for an increase in their daily wage by an average of Rs. 60 a day, inclusive of the Dearness Allowance applicable since April.

This is the highest one-time increase in minimum wages since 1979, when the "tailoring industry" was brought under the ambit of the Minimum Wages Act, 1948.

## Court directive

The fixing of minimum wages for different categories of garment workers was based on the recommendations of the tripartite sub-committee of workers, managements and government representatives, set up following a direction of the High Court of Karnataka.

Garment and Textile Workers Union (GATWU) had approached the High Court in 2010 challenging an earlier notification and seeking revision of wages.

The High Court, in its judgement of March, 2013, said that wages should be revised after tripartite talks.

As per the new notification, a helper in a garment unit cannot now be paid less than Rs. 5,720 per month (which would go up to Rs. 6,450 inclusive of DA).

"This is not a living wage that can take care of even the minimum needs of a person in a city. Yet, we see this as a victory because it is an improvement over earlier revisions and it follows our consistent struggle," said Jayaram K.R. of GATWU.

J.T. Jinkalappa, Joint Labour Commissioner, who chaired the sub-committee, said that the government is also in the process of fixing minimum wages for workers in cloth dying and printing units.

"These workers are being brought under the minimum wages law for the first time," he told *The Hindu*.

## 'At least Rs. 10,000'

Mr. Jayaram said that the long-term aim of the labour unions is to push for a minimum wages of Rs, 10,000 to Rs. 12,000, considering the rate of inflation.

S. Prasanna Kumar of Centre of Indian Trade Unions (CITU) and member of the Karnataka Minimum Wage Advisory Board said that the very system of fixing wages only for "scheduled employments" (numbering 79 in Karnataka) is flawed.

Mr. Kumar said that the demand for a minimum of Rs. 10,000 for any unskilled worker is based on a "scientific calculation" taking into account expenses towards 2,800 calories of food for a family of three units, 73 yards of cloth and an additional 25 per cent of this sum for other expenses.

ಮೇ-01 ರ ಕಾರ್ಮಿಕರ ದಿನಾಚರಣೆ- 2014
ಮಂಡ್ಯದಲ್ಲಿ GATWU ಕಾರ್ಯಕರ್ತರು.

# 'ಸೌಲಭ್ಯ ನೇರವಾಗಿ ಕಾರ್ಮಿಕರಿಗೆ ಸಿಗಲಿ'

ಪ್ರಜಾವಾಣಿ ವಾರ್ತೆ

ಮಂಡ್ಯ: ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ನೇರವಾಗಿ ಕಾರ್ಮಿಕರೇ ಪಡೆದುಕೊಳ್ಳಬೇಕು. ಸೌಲಭ್ಯ ಮಧ್ಯವರ್ತಿಗಳ ಪಾಲಾಗಲು ಬಿಡ ಬಾರದು ಎಂದು ಪ್ರಧಾನ ಸಿವಿಲ್ ನ್ಯಾಯಾಧೀಶ ಸದಾನಂದ ದೊಡ್ಡಮನಿ ಸಲಹೆ ನೀಡಿದರು.

ನಗರದ ಗಾಂಧಿ ಭವನದಲ್ಲಿ ಗುರುವಾರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಕರ್ನಾಟಕ ಶ್ರಮಿಕ ಶಕ್ತಿ, ವಕೀಲರ ಸಂಘ ಏರ್ಪಡಿಸಿದ್ದ 'ಅಸಂಘಟಿತ ಕಾರ್ಮಿಕರಿಗೆ ಕಾನೂನು ಅರಿವು' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕೂಲಿ ಕಾರ್ಮಿಕರಿಗೆ ಕಾನೂನುನಿಂದ ಸಿಗುವ ಸೇವಾ ಸವಲತ್ತುಗಳ ಬಗ್ಗೆ ತಿಳಿದುಕೊಳ್ಳುವ ಪ್ರಯತ್ನ ಕಾರ್ಮಿಕರು ಮಾಡಬೇಕು. ಕಾರ್ಮಿಕರಿಗೆ ಸರ್ಕಾರವು ₹ 300 ಕೋಟಿ ಅನುದಾನ ನೀಡಿದೆ. ಅದರ ಪ್ರಯೋಜನ ಪಡೆದುಕೊಳ್ಳುವಲ್ಲಿ ಕಾರ್ಮಿಕರು ಹಿಂದಿದ್ದಾರೆ ಎಂದು ತಿಳಿಸಿದರು.

ಕಾರ್ಮಿಕರಲ್ಲಿ ಒಗ್ಗಟ್ಟು ಹಾಗೂ ಸಂಘಟನಾ ಮನೋಭಾವ ಕಡಿಮೆ. ಕಾರ್ಮಿಕರಿಗೆ ಸವಲತ್ತುಗಳನ್ನು ಒದಗಿಸಲು ಕಾರ್ಮಿಕರ ಪರವಾಗಿ ಕಾನೂನು ಪ್ರಾಧಿಕಾರ ಕೆಲಸ ಮಾಡಲಿದೆ. ಇದರ ಸದುಪಯೋಗ ಪಡೆದುಕೊಳ್ಳಿ ಎಂದು ಸಲಹೆ ನೀಡಿದರು.

ಕರ್ನಾಟಕ ಜನಶಕ್ತಿ ಪ್ರಧಾನ ಸಂಚಾಲಕ ಡಾ.ವಾಸು ಮಾತನಾಡಿ, ಜಿಲ್ಲೆಯಲ್ಲಿ ಕಾರ್ಮಿಕರಿಗೆ ಸಿಗಬೇಕಾದ ಸವಲತ್ತುಗಳು ಸಿಗುತ್ತಿಲ್ಲ. ಶೇ 4ರಷ್ಟು ಸಂಘಟಿತರು ಹಾಗೂ ಶೇ 94ರಷ್ಟು ಅಸಂಘಟಿತ ಕಾರ್ಮಿಕ ವರ್ಗದವರಿದ್ದಾರೆ ಎಂದರು.

ಬೆಂಗಳೂರು ಗಾರ್ಮೆಂಟ್ಸ್ ಅಂಡ್ ಟೆಕ್ಸ್‌ಟೈಲ್ಸ್ ವರ್ಕರ್ಸ್ ಯೂನಿಯನ್ ಉಪಾಧ್ಯಕ್ಷೆ ಪ್ರತಿಭಾ, ಕರ್ನಾಟಕ ಜನಶಕ್ತಿ ಕಾರ್ಯಕಾರಿ ಸಮಿತಿ ಸದಸ್ಯ ಲಕ್ಷ್ಮಣ್ ಚೀರನಹಳ್ಳಿ, ವಕೀಲರ ಸಂಘದ ಅಧ್ಯಕ್ಷ ಕೆ.ಎಂ. ಬಸವರಾಜು, ವಕೀಲ ಬಿ.ಟಿ. ವಿಶ್ವನಾಥ್, ಕರ್ನಾಟಕ ರಾಜ್ಯ ಲೋಡಿಂಗ್ ಮತ್ತು ಅನ್‌ಲೋಡಿಂಗ್ ಕಾರ್ಮಿಕರ ಒಕ್ಕೂಟದ ಮುಖಂಡ ಕೃಷ್ಣಪ್ಪ ಹಾಜರಿದ್ದರು.



ಮಂಡ್ಯದ ಗಾಂಧಿ ಭವನದಲ್ಲಿ ಗುರುವಾರ ನಡೆದ 'ಅಸಂಘಟಿತ ಕಾರ್ಮಿಕರಿಗೆ ಕಾನೂನು ಅರಿವು' ಕಾರ್ಯಕ್ರಮವನ್ನು ಪ್ರಧಾನ ಸಿವಿಲ್ ನ್ಯಾಯಾಧೀಶ ಸದಾನಂದ ದೊಡ್ಡಮನಿ ಉದ್ಘಾಟಿಸಿದರು. ರತ್ನಮ್ಮ, ಪ್ರತಿಭಾ, ಕೆ.ಎಂ. ಬಸವರಾಜು, ಡಾ.ವಾಸು, ಬಿ.ಟಿ. ವಿಶ್ವನಾಥ್, ಲಕ್ಷ್ಮಣ ಚೀರನಹಳ್ಳಿ ಇದ್ದಾರೆ.

೩೦-01-2014 ಕಾರ್ಮಿಕರ ದಿನಾಚರಣೆ. ಮಂಡ್ಯದಲ್ಲಿ GATWU.

ಕಾರ್ಮಿಕರ ದಿನಾಚರಣೆ

# ಸಂಘಟಿತರಾಗಿ ಸರ್ಕಾರದ ಸವಲತ್ತು ಪಡೆಯಿರಿ

**■ ಕಾರ್ಮಿಕರಿಗೆ ನ್ಯಾ। ಸದಾನಂದ ದೊಡ್ಡಮನಿ ಕಿವಿಮಾತು ■ ಅಸಂಘಟಿತ ಕಾರ್ಮಿಕರಿಗೆ ಕಾನೂನು ನೆರವು**

## ಮಂಡ್ಯ

**ಮಂಡ್ಯ:** ಅಸಂಘಟಿತ ಕಾರ್ಮಿಕರು ಸಂಘಟಿತರಾಗುವುದರೊಂದಿಗೆ ಕಾನೂನು ಅರಿವನ್ನು ಪಡೆದುಕೊಂಡು ಸರ್ಕಾರದ ಸವಲತ್ತು ಪಡೆದುಕೊಳ್ಳಬೇಕು ಎಂದು ಪ್ರಧಾನ ಸಿವಿಲ್ ನ್ಯಾಯಾಧೀಶ ಹಾಗೂ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸದಾನಂದ ದೊಡ್ಡಮನಿ ಹೇಳಿದರು.


ಗುರುವಾರ ನಗರದ ಗಾಂಧಿಭವನದಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ವಕೀಲರ ಸಂಘ, ಕರ್ನಾಟಕ ಶ್ರಮಿಕ ಶಕ್ತಿ, ಗಾರ್ಮೆಂಟ್ಸ್ ಅಂಡ್ ಟೆಕ್ಸ್‌ಟೈಲ್ಸ್ ವರ್ಕರ್ಸ್ ಯೂನಿಯನ್ ಹಾಗೂ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಸಂಘಟನೆ ಕಾರ್ಮಿಕರ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಕಾರ್ಮಿಕರಿಗೆ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕಾರ್ಮಿಕರು ಅಸಂಘಟಿತರಾಗಿರುವುದರಿಂದ ಬಂಡವಾಳಶಾಹಿಗಳಿಂದ ದುರುಪಯೋಗಕ್ಕೆ ಒಳಗಾಗುತ್ತಿದ್ದಾರೆ. ಇದರ ಪರಿಣಾಮ ಕಾರ್ಮಿಕರಿಗಾಗಿ ಸರ್ಕಾರ ನೀಡುತ್ತಿರುವ ಸೌಲಭ್ಯ-ಸವಲತ್ತುಗಳಿಂದ ಕಾರ್ಮಿಕರು ನಿರಂತರವಾಗಿ ವಂಚಿತರಾಗುತ್ತಿದ್ದಾರೆಂದು ವಿಷಾದಿಸಿದರು.

ಪರಿಸ್ಥಿತಿ ಅರಿತು ಕಾರ್ಮಿಕರೆಲ್ಲರೂ ಒಗ್ಗೂಡಬೇಕು. ಕಾರ್ಮಿಕರು ಕಾನೂನು ಅರಿವು ಪಡೆದುಕೊಳ್ಳುವ ಮೂಲಕ ಕೇಂದ್ರ ಮತ್ತು ರಾಜ್ಯ ಸರ್ಕಾರ ಯೋಜನೆಗಳ ಮಾಹಿತಿ ಅರಿತುಕೊಂಡಾಗ ಯೋಜನೆಗಳ ಫಲಾನುಭವಿಗಳಾಗಲು ಸಾಧ್ಯವಾಗಲಿದೆ ಎಂದು ತಿಳಿಸಿದರು.

ಗಾರ್ಮೆಂಟ್ಸ್ ನೌಕರರು, ಗುತ್ತಿಗೆ ಕಾರ್ಮಿಕರು ಸೇರಿದಂತೆ ಅಸಂಘಟಿತ ಕಾರ್ಮಿಕರಲ್ಲಿ ಕಾನೂನು ಅರಿವು [illegible] ಕಾನೂನು ಸೇವಾ ಪ್ರಾಧಿಕಾರ ಕೈ ಜೋಡಿಸಿದೆ. ಕಾರ್ಮಿಕರು ಕಾನೂನು [illegible] ಪಡೆಯುವುದರಿಂದ ಕಾನೂನು ಚೌಕಟ್ಟಿನಲ್ಲಿ ಕೆಲವೊಂದು ಸಮಸ್ಯೆಗಳಿಗೆ ಪರಿಹಾರ ಪಡೆದುಕೊಳ್ಳಲು ಸಹಕಾರಿಯಾಗಲಿದೆ ಎಂದು ನುಡಿದರು.

**ಸಹಾಯವಾಣಿ:** ಕಾನೂನು ಸೇವಾ ಪ್ರಾಧಿಕಾರಿ ಅಸಂಘಟಿತ ಕಾರ್ಮಿಕರಿಗೆ ಕಾನೂನು ನೆರವು ಒದಗಿಸುವ ನಿಟ್ಟಿನಲ್ಲಿ ಸಹಾಯವಾಣಿಯೊಂದನ್ನು ಅಸ್ತಿತ್ವಕ್ಕೆ ತಂದಿದೆ. ಕಾರ್ಮಿಕರು ಸಹಾಯವಾಣಿಗೆ ಕರೆ ಮಾಡಿ ಕಾನೂನು ನೆರವು ಪಡೆದುಕೊಳ್ಳಬಹುದು ಎಂದರು.



ಮಂಡ್ಯದ ಗಾಂಧಿಭವನದಲ್ಲಿ ಕಾರ್ಮಿಕರ ದಿನಾಚರಣೆ ಏರ್ಪಡಿಸಿದ್ದ ಅಸಂಘಟಿತ ಕಾರ್ಮಿಕರಿಗೆ ಕಾನೂನು ಅರಿವು ಕಾರ್ಯಕ್ರಮವನ್ನು ನ್ಯಾ। ಸದಾನಂದ ಎಂ. ದೊಡ್ಡಮನಿ ಉದ್ಘಾಟಿಸಿದರು.

ಮನುಷ್ಯ ಹಣಕ್ಕೆ ನೀಡುವಷ್ಟು ಪ್ರಾಮುಖ್ಯತೆಯನ್ನು ಬೇರೆ ಯಾವ ವಿಚಾರಗಳಿಗೂ ನೀಡುತ್ತಿಲ್ಲ. ಕಾರ್ಮಿಕರು ತಮ್ಮ ಮಕ್ಕಳನ್ನು ಶಿಕ್ಷಣವಂತರನ್ನಾಗಿ ಮಾಡಬೇಕು. ಜ್ಞಾನವಿದ್ದರೆ ನಿರ್ಭೀತಿಯಿಂದ ಜೀವನ ನಡೆಸಬಹುದು. ಆದ್ದರಿಂದ ಕಾರ್ಮಿಕರು ಹಣ, ಆಸ್ತಿ ಸಂಪಾದಿಸುವ ಬದಲು ಮಕ್ಕಳನ್ನೇ ನಾಡಿನ ಆಸ್ತಿಯನ್ನಾಗಿ ರೂಪಿಸಲು ಸಲಹೆ ನೀಡಿದರು.

**ಕಾನೂನುಗಳು ಜಾರಿಯಾಗಿಲ್ಲ:** ಜಿಲ್ಲೆಯಲ್ಲಿರುವ ಬಹುತೇಕ ಖಾಸಗಿ ಕಾರ್ಖಾನೆಗಳಲ್ಲಿ ಕಾರ್ಮಿಕ ಕಾನೂನುಗಳು ಸಮರ್ಪಕವಾಗಿ ಜಾರಿಯಾಗಿಲ್ಲ. ಕಾರ್ಮಿಕರಿಗೆ ಸಿಗಬೇಕಾದ ಸವಲತ್ತುಗಳೂ ಸರಿಯಾದ ರೀತಿಯಲ್ಲಿ ಸಿಗುತ್ತಿಲ್ಲ. ಇದು ಕಾರ್ಮಿಕ ಇಲಾಖೆಗೆ ಗೊತ್ತಿದ್ದರೂ ಸಂಬಂಧಿಸಿದವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದೆ ಕಣ್ಮುಚ್ಚಿ ಕುಳಿತಿದೆ ಎಂದು ಕರ್ನಾಟಕ ಜನಶಕ್ತಿ ಸಂಘಟನೆ ಮುಖಂಡ ಡಾ.ವಾಸು ಆರೋಪಿಸಿದರು.

ಮಂಡ್ಯದ ಹೊರವಲಯದಲ್ಲಿರುವ ಮದ್ಯಪಾನೀಯ ಶೇಖರಣಾ ಘಟಕ, ಗೆಜ್ಜಲಗೆರೆಯಲ್ಲಿರುವ ಗಾರ್ಮೆಂಟ್ಸ್ ಸೇರಿದಂತೆ ಬಹುತೇಕ ಕಾರ್ಖಾನೆಗಳಲ್ಲಿ ಕಾರ್ಮಿಕ ಕಾನೂನುಗಳ ಉಲ್ಲಂಘನೆ ಆಗುತ್ತಿವೆ. ನಿರಂತರವಾಗಿ ಕಾರ್ಮಿಕರು ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ಸಂಘಟಿತ ವಲಯ ಕುಸಿಯುತ್ತಿದ್ದು, ಅಸಂಘಟಿತ ಕಾರ್ಮಿಕ ವಲಯ ವಿಸ್ತಾರಗೊಳ್ಳುತ್ತಿರುವುದರಿಂದ ಕಾರ್ಮಿಕರ ಕಾನೂನುಗಳ ಜಾರಿ ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು.

ಸರ್ಕಾರಿ ಕಚೇರಿಗಳಲ್ಲಿ ಗುತ್ತಿಗೆ ಸೇವಾ ಕೆಲಸ ಶುರುವಾದ ಮೇಲೆ ಕಾರ್ಮಿಕ ಕಾನೂನುಗಳು ಸತ್ತುಹೋಗಿವೆ. ಸರ್ಕಾರಿ ಕಚೇರಿಗಳಲ್ಲಿ ಕಾರ್ಮಿಕ ಕಾನೂನುಗಳು ಉಲ್ಲಂಘನೆಯಾಗುತ್ತಿವೆ. ಕಾರ್ಮಿಕರ ದೌರ್ಬಲ್ಯ, ಅಸಹಾಯಕತೆ ವ್ಯವಸ್ಥಿತವಾಗಿ ದುರ್ಬಳಕೆಯಾಗುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಕೇಂದ್ರದ ಕಾರ್ಮಿಕ ಇಲಾಖೆ ವರದಿ ಪ್ರಕಾರ ಶೇ.4ರಷ್ಟು ಸಂಘಟಿತ ಹಾಗೂ ಶೇ. 96ರಷ್ಟು ಅಸಂಘಟಿತ ಕಾರ್ಮಿಕರಿದ್ದಾರೆ. ಈ ಕಾರಣದಿಂದಾಗಿಯೇ ಕಾರ್ಮಿಕ ಕಾನೂನು ಕೂಡ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಕೀಲರ ಸಂಘದ ಅಧ್ಯಕ್ಷ ಬಸವರಾಜು, ವಕೀಲ ಬಿ.ಟಿ.ವಿಶ್ವನಾಥ್, ಕರ್ನಾಟಕ ಜನಶಕ್ತಿ ಸಂಘಟನೆ ಮುಖಂಡ ಲಕ್ಷ್ಮಣ್ ಚೀರನಹಳ್ಳಿ ಭಾಗವಹಿಸಿದ್ದರು.

# ಕಾರ್ಮಿಕರು ಸಂಘಟಿತರಾಗಬೇಕು

**ಕಾನೂನು ಅರಿವು ಕಾರ್ಯಕ್ರಮದಲ್ಲಿ ನ್ಯಾ.ಸದಾನಂದ ದೊಡ್ಡಮನಿ ಮನವಿ, ಯೋಜನೆಗಳ ಮಾಹಿತಿ ಪಡೆಯಲು ಕಾನೂನು ಅರಿವು ಅಗತ್ಯ। ಕಾರ್ಮಿಕರು ತಮ್ಮ ಮಕ್ಕಳಿಗೆ ಶಿಕ್ಷಣವಂತರನ್ನಾಗಿ ಮಾಡಬೇಕು। ಜ್ಞಾನವಿದ್ದರೆ ನಿರ್ಭೀತಿಯಿಂದ ಜೀವನ ನಡೆಸಬಹುದು। ಮಂಡ್ಯದ ಹೊರವಲಯದಲ್ಲಿರುವ ಮದ್ಯಪಾನೀಯ ಶೇಖರಣಾ ಘಟಕ, ಗೆಜ್ಜಲಗೆರೆಯಲ್ಲಿರುವ ಗಾರ್ಮೆಂಟ್ಸ್‌ಗಳು ಕಾರ್ಮಿಕರ ಕಾನೂನು ಉಲ್ಲಂಘನೆ**




ಅಸಂಘಟಿತ ಕಾರ್ಮಿಕರಿಗೆ ಕಾನೂನು ಅರಿವು ಕಾರ್ಯಕ್ರಮವನ್ನು ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಸದಾನಂದ ದೊಡ್ಡಮನಿ ಉದ್ಘಾಟಿಸಿದರು.

**ಕ.ಪ್ರ. ವಾರ್ತೆ। ಮಂಡ್ಯ। ಮೇ 1**

ಅಸಂಘಟಿತ ಕಾರ್ಮಿಕರು ಸಂಘಟಿತರಾಗಿ ಕಾನೂನು ಅರಿವು ಪಡೆಯುವ ಮೂಲಕ ಸಕ[illegible] ಯೋಜನೆಗಳ ಫಲಾನುಭವಿಗಳಾಗಬೇಕು ಎಂದು ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಸದಾನಂದ ದೊಡ್ಡಮನಿ ಗುರುವಾರ ಕಿವಿಮಾತು ಹೇಳಿದರು.

ನಗರದ ಗಾಂಧಿಭವನದಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ವಕೀಲರ ಸಂಘ, ಕರ್ನಾಟಕ ಶ್ರಮಿಕ ಶಕ್ತಿ ಮತ್ತಿತರ ಸಂಘಟನೆಗಳಿಂದ ಆಯೋಜಿಸಿದ್ದ ಕಾರ್ಮಿಕರಿಗೆ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕಾರ್ಮಿಕರಲ್ಲಿನ ಒಗ್ಗಟ್ಟಿನ ಕೊರತೆ ಹೆಚ್ಚಾಗುತ್ತಿದ್ದು, ಇದನ್ನು ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ. ಕಾರ್ಮಿಕರು ಕಾನೂನು ಅರಿವು ಪಡೆದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಾರಿಗೆ ತಂದಿರುವ ಯೋಜನೆಗಳ ಮಾಹಿತಿ ಸಿಗುತ್ತದೆ. ಇದರಿಂದ ಕಾರ್ಮಿಕರು ಯೋಜನೆಗಳ ಸೌಲಭ್ಯ ಪಡೆಯಲು ಸಾಧ್ಯ ಎಂದರು.

**ಕಾರ್ಮಿಕ ಕಾನೂನು ಜಾರಿಯಾಗಿಲ್ಲ:** ಕರ್ನಾಟಕ ಜನಶಕ್ತಿ ಸಂಘಟನೆ ಮುಖಂಡ ಡಾ. ವಾಸು ಮಾತನಾಡಿ, ಜಿಲ್ಲೆಯ ಬಹುತೇಕ ಖಾಸಗಿ ಕಾರ್ಖಾನೆಗಳಲ್ಲಿ ಕಾರ್ಮಿಕ ಕಾನೂನುಗಳು ಜಾರಿಯಾಗಿಲ್ಲ. ಇದರ ಅರಿವಿದ್ದರೂ ಕಾರ್ಮಿಕ ಇಲಾಖೆ ಕಣ್ಮುಚ್ಚಿ ಕುಳಿತಿದೆ ಎಂದು ಟೀಕಿಸಿದರು. ಮಂಡ್ಯದ ಹೊರವಲಯದಲ್ಲಿರುವ ಮದ್ಯಪಾನೀಯ ಶೇಖರಣಾ ಘಟಕ, ಗೆಜ್ಜಲಗೆರೆಯಲ್ಲಿರುವ ಗಾರ್ಮೆಂಟ್ಸ್ ಸೇರಿದಂತೆ ಬಹುತೇಕ ಕಾರ್ಖಾನೆಗಳಲ್ಲಿ ಕಾರ್ಮಿಕ ಕಾನೂನುಗಳ ಉಲ್ಲಂಘನೆ ಆಗುತ್ತಿವೆ. ನಿರಂತರವಾಗಿ ಕಾರ್ಮಿಕರು ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ ಎಂದರು.

ಕಾರ್ಮಿಕರ ತ್ಯಾಗ ಬಲಿದಾನಗಳಿಂದಾಗಿ ಕಾರ್ಮಿಕ ಕಾನೂನು ಜಾರಿಗೆ ಬಂದಿದೆ. ಆದರೆ, ಜಾಗತೀಕರಣ ಅಲೆಯಲ್ಲಿ ಕಾರ್ಮಿಕ ಕಾನೂನುಗಳು ದುರ್ಬಲಗೊಳ್ಳುತ್ತಿವೆ. ಖಾಸಗಿ ಕಾರ್ಖಾನೆಗಳು ಮಾತ್ರವಲ್ಲದೆ ಸಂಸತ್ ಭವನ, ವಿಧಾನಸೌಧದಲ್ಲಿಯೂ ಗುತ್ತಿಗೆ ಪದ್ಧತಿ ಜೀವಂತವಾಗಿದೆ ಎಂದು ವಿಷಾದಿಸಿದರು.

ಕಾರ್ಯಕ್ರಮದಲ್ಲಿ ವಕೀಲರ ಸಂಘದ ಅಧ್ಯಕ್ಷ ಬಸವರಾಜು, ವಕೀಲ ಬಿ.ಟಿ. ವಿಶ್ವನಾಥ್, ಕರ್ನಾಟಕ ಜನಶಕ್ತಿ ಸಂಘಟನೆ ಮುಖಂಡ ಲಕ್ಷ್ಮಣ್ ಚೀರನಹಳ್ಳಿ ಇದ್ದರು.

## ಸಹಾಯವಾಣಿ ಅಸ್ತಿತ್ವಕ್ಕೆ



ಕಾನೂನು ಸೇವಾ ಪ್ರಾಧಿಕಾರ ಅಸಂಘಟಿತ ಕಾರ್ಮಿಕರಿಗೆ ಕಾನೂನು ನೆರವು ಒದಗಿಸುವ ನಿಟ್ಟಿನಲ್ಲಿ ಸಹಾಯವಾಣಿ ಅಸ್ತಿತ್ವಕ್ಕೆ ತಂದಿದೆ. ಕಾರ್ಮಿಕರು ಸಹಾಯವಾಣಿಗೆ ಕರೆ ಮಾಡಿ ಕಾನೂನು ನೆರವು ಪಡೆಯಬಹುದು ಎಂದರು. ಮನುಷ್ಯ ಹಣಕ್ಕೆ ನೀಡುವಷ್ಟು ಪ್ರಾಮುಖ್ಯತೆ ಬೇರೆ ಯಾವ ವಿಚಾರಗಳಿಗೂ ನೀಡುತ್ತಿಲ್ಲ. ಕಾರ್ಮಿಕರು ತಮ್ಮ ಮಕ್ಕಳಿಗೆ ಶಿಕ್ಷಣವಂತರನ್ನಾಗಿ ಮಾಡಬೇಕು. ಜ್ಞಾನವಿದ್ದರೆ ನಿರ್ಭೀತಿಯಿಂದ ಜೀವನ ನಡೆಸಬಹುದು. ಆದ್ದರಿಂದ ಕಾರ್ಮಿಕರು ಹಣ ಆಸ್ತಿ ಸಂಪಾದಿಸುವ ಬದಲು ಮಕ್ಕಳನ್ನೇ ನಾಡಿನ ಆಸ್ತಿಯನ್ನಾಗಿ ರೂಪಿಸಬೇಕು ಎಂದು ಸಲಹೆ ನೀಡಿದರು.